**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ನವಲಗುಂದ**

| | |
|---|---|
| ಸಿ.ಸಿ. ನಂಬರ್ | - 79/2024 |
| ಸಿ.ಡಬ್ಲ್ಯೂ | - 14 |
| ಪಿ.ಡಬ್ಲ್ಯೂ | - 11 |
| ಸಾಕ್ಷಿಯ ಹೆಸರು | - ಶಿವಕ್ಕ ಬಸಪ್ಪ ಕುಂಬಾರ |
| ವಯಸ್ಸು | - 57 ವರ್ಷ |
| ಉದ್ಯೋಗ | - ಮನೆಗೆಲಸ |
| ವಾಸ ಸ್ಥಳ | - ತುಪ್ಪದಕುರಹಟ್ಟಿ |

ದಿನಾಂಕಃ 12/03/2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-**

1. ಪ್ರಕರಣದ ಆರೋಪಿಯ ಪರಿಚಯ ಇದೆ. ಚಾಸಾ-1 ನನ್ನ ಮಗ. ಚಾಸಾ-9 ರಿಂದ 13 ರವರ ಪರಿಚಯವಿಲ್ಲ. ಮೃತ ಬಸಪ್ಪ ವೀರಪ್ಪ ಕುಂಬಾರ ರವರು ನನ್ನ ಗಂಡ.

2. ಈಗ ಅಂದಾಜು 2 ವರ್ಷಗಳ ಹಿಂದೆ ನಲವಡಿ ಟೋಲ್ ಹತ್ತಿರ ಅಪಘಾತವಾಗಿದ್ದು, ಸದರಿ ಅಪಘಾತದಲ್ಲಿ ಬಸಪ್ಪ ವೀರಪ್ಪ ಕುಂಬಾರ ರವರು ಮೃತಪಟ್ಟಿರುತ್ತಾರೆ. ಅದರೆ ಸದರಿ ಅಪಘಾತ ಯಾವ ವಾಹನಗಳ ನಡುವೆ ಆಯಿತು, ಯಾವ ರೀತಿ ಆಯಿತು ಹಾಗೂ ಯಾರ ತಪ್ಪಿನಿಂದ ಆಯಿತು ಎಂದು ನನಗೆ ಗೊತ್ತಿಲ್ಲ. ಪ್ರಕರಣಕ್ಕೆ ಸಂಬಂಧಿಸಿ ನಾನು ಪೋಲಿಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ –</u>**

ದಿನಾಂಕಃ 03-09-2023 ರಂದು ಸಂ.06.00 ಗಂಟೆಗೆ ಆರೋಪಿ ಚಾಲನಾ ಪರವಾನಗೆ ಹೊಂದದೇ ಮೋಟಾರ ಸೈಕಲ್ ಸಂಃ KA-26/L-0274 ನೇದ್ದನ್ನು ವಿಮೆ ಮಾಡಿಸದೇ ತನ್ನ ಮೋಟಾರ ಸೈಕಲ್ ನ ಹಿಂದೆ ನನ್ನ ಗಂಡ ಬಸಪ್ಪ ವೀರಪ್ಪ ಕುಂಬಾರ ರವರನ್ನು ಕೂರಿಸಿಕೊಂಡು ಹುಬ್ಬಳ್ಳಿಯಿಂದ ಗದಗ ಕಡೆಗೆ ಅತೀ ವೇಗ ಹಾಗೂ ಅಲಕ್ಷ್ಯತನದಿಂದ ಚಲಾಯಿಸಿ ವಾಹನವನ್ನು ನಿಯಂತ್ರಿಸಲಾಗದೇ ತನ್ನ ಮುಂದೆ ಹೋಗುತ್ತಿದ್ದ ಲಾರಿ ಸಂಃ KA-52/A-1299 ನೇದ್ದರ ಹಿಂದಿನ ಗಾಲಿಯ ಹತ್ತಿರ ಮೋಟಾರ ಸೈಕಲ್ ನ್ನು ಕೆಡವಿದ್ದರಿಂದ ಹಿಂಬದಿಯ ಸವಾರನ ತಲೆಯ ಮೇಲೆ ಲಾರಿ ಹಾಯ್ದು ಸ್ಥಳದಲ್ಲೇ ಮೃತಪಟ್ಟಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಅಪಘಾತ ಆರೋಪಿ ಚಾಲಕನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಈ ಮೇಲಿನಂತೆ ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಅಲ್ಲಗೆಳೆದ ಭಾಗವನ್ನು **ನಿಪಿ-24** ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಶ್ರೀ ಎಂ ಎಸ್ ಎಚ್ ವಕೀಲರಿಂದ</u>**

ಏನು ಇಲ್ಲ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**

**ನವಲಗುಂದ.**